*ಕರ್ನಾಟಕ ಸರ್ಕಾರ* *(ಸಿ.ಆರ್.ಪಿ.67)*

| |
|---|
| *ಹೇಳಿಕೆ ಹಾಳೆ*<br>*ಆರ್.ಪಿ.ಸಂಖ್ಯೆ 57*<br>*ನಮೂನೆ ಸಂಖ್ಯೆ 4*<br>*(ಸಿವಿಲ್ )* |

*3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,*
***ಚಿಕ್ಕಬಳ್ಳಾಪುರ.***

***ಎಸ್.ಸಿ. ಸಂಖ್ಯೆ: 77/2020***

| | |
|---|---|
| *PW* | *16* |
| *CW* | *23* |

*ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ* ***11.08.2022***

ಸಾಕ್ಷಿಯ ಹೆಸರು : ಮಂಜುಳಾ
ತಂದೆಯ/ಗಂಡನ ಹೆಸರು : ಕೃಷ್ಣಮೂರ್ತಿ
ವಯಸ್ಸು : 35 ವರ್ಷ
ಉದ್ಯೋಗ : ಗೃಹಿಣಿ
ವಾಸಸ್ಥಳ : ಕಣ್ಣೂರು

*ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ*

***1.*** *ಮೃತ ನವೀನ್ ಗೊತ್ತಿಲ್ಲ. ಚಾಸಾ -1 ರಿಂದ 5 ಗೊತ್ತಿಲ್ಲ. 2 ನೇ ಆರೋಪಿ ನನ್ನ ಗಂಡ , 4 ನೇ ಆರೋಪಿ ಗೊತ್ತಿಲ್ಲ. 1 ನೇ ಆರೋಪಿ ಗೊತ್ತು. 1 ನೇ ಆರೋಪಿಗೆ ನಾವು ಜಮೀನಿನ ಕೇಸು ಕೊಟ್ಟಿದ್ದೆವು. 3 ನೇ ಆರೋಪಿ ಗೊತ್ತು.*

*2. 2 ನೇ ಆರೋಪಿ ಜೊತೆ ನನ್ನ ಮದುವೆ 15 ವರ್ಷಗಳ ಹಿಂದೆ ಆಯಿತು. ನಮಗೆ ಇಬ್ಬರು ಮಕ್ಕಳು. ನಾನು ಕಣ್ಣೂರಿನಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತೇನೆ. 2 ನೇ ಅರೋಪಿ ಚಾಲಕನ ಕೆಲಸ ಮಾಡುತ್ತಾನೆ. ನನ್ನ ಹೆಸರಿಗೆ ಕೆಎ – ಜೆ ವಿ - 8813 ದ್ವಿಚಕ್ರ ವಾಹನ ಇರುತ್ತದೆ. ಅದನ್ನು ನಾನು ಮತ್ತು ನನ್ನ ಗಂಡ ಉಪಯೋಗಿಸುತ್ತೇವೆ. ನಮ್ಮ ತಂದೆಗೆ ಇಬ್ಬರು ಹೆಂಡತಿಯರು ಮೊದಲನೇಯವರು ತೀರಿಕೊಂಡ ನಂತರ ನಮ್ಮ ತಾಯಿ ಪಾರ್ವತಮ್ಮ ನನ್ನು ಮದುವೆ ಮಾಡಿಕೊಂಡರು. ಮೊದಲನೆಯ ಹೆಂಡತಿಗೆ*

*PW:16CW:23*

*ಶಿವಣ್ಣ ಎನ್ನುವ ಒಬ್ಬ ಮಗ . ನಮ್ಮ ತಾಯಿಗೆ ನಾನು ಮತ್ತು ನಮ್ಮ ಅಣ್ಣ ವೆಂಕಟೇಶ ಇಬ್ಬರು ಮಕ್ಕಳು.*

*3. ನಮ್ಮ ತಂದೆಗೆ ಜಮೀನು ಇತ್ತು . ಅದನ್ನು ನಮಗೆ ಕೊಡುತ್ತೇನೆ ಎಂದು ಹೇಳಿ ನಮ್ಮ ಅಣ್ಣ ಶಿವಣ್ಣ ನಮ್ಮಿಂದ ಸಹಿ ಮಾಡಿಸಿಕೊಂಡು ಹಣ ಕೊಡದೇ ಮೋಸ ಮಾಡಿರುತ್ತಾನೆ. ಹೋಗಿ ಕೇಳಿದಾಗ ನಾನು ಕೊಡುವುದಿಲ್ಲ , ಏನಾದರೂ ಮಾಡಿಕೋ ಹೋಗು ಎಂದು ಹೇಳಿದ . ಉಳಿದ ಅಸ್ತಿಗಳಲ್ಲಿ ಭಾಗ ಕೇಳಿದೆವು, ಅದನ್ನು ಕೊಡುವುದಿಲ್ಲ ಎಂದು ಹೇಳಿದ. ನಂತರ ನಾನು , ನಮ್ಮ ಅಣ್ಣ , ನಮ್ಮ ತಾಯಿ ವಕೀಲರ ಮೂಲಕ ಕೇಸು ಹಾಕಿದೆವು. ನಮ್ಮ ಊರಿನಲ್ಲಿ ವಕೀಲರಾದ ನವೀನ್ ಕುಮಾರ್ ರವರ ಅಣ್ಣ ಇದ್ದಾರೆ ಅವರು ವಕೀಲರನ್ನು ಪರಿಚಯ ಮಾಡಿಸಿದರು. ಸದರಿ ಕೇಸು ಈಗಲೂ ನಡೆಯುತ್ತಿದೆ. ಸದರಿ ಕೇಸನ್ನು ಮೊದಲು ನವೀನ್ ಕುಮಾರ್ ರವರಿಗೆ ಕೊಟ್ಟಿದ್ದೆ. ಅವರು ತೀರಿಕೊಂಡ ನಂತರ ವಿಶ್ವನಾಥ್ ರವರು ನಡೆಸುತ್ತಿದ್ದಾರೆ. ನನ್ನ ಗಂಡನಿಗೂ , ವಕೀಲರಾದ ನವೀನ್ ಕುಮಾರ್ ರವರಿಗೆ ಯಾವುದೇ ಸಂಬಂಧ ಇಲ್ಲ. ನನ್ನ ಗಂಡ ವಕೀಲ ನವೀನ್ ಕುಮಾರ್ ಹತ್ತಿರ ಕೆಲಸ ಮಾಡುತ್ತಿರಲಿಲ್ಲ. ವಕೀಲರಾದ ನವೀನ್ ಕುಮಾರ್ ಬದುಕಿದ್ದಾಗ ನನ್ನ ಗಂಡನಿಗೆ ಏನೂ ಹೇಳುತ್ತಿರಲಿಲ್ಲ. ಮೃತ ನವೀನ್ ಹೇಗೆ ತೀರಿಕೊಂಡ , ಅತನ ಸಾವಿಗೆ ಯಾರು ಕಾರಣ ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.*

***(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.)***

*<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>*

***4 )** ನಾನು ಈಗ ಓದಿ ಹೇಳಿದಂತೆ '' ನಾನು ನನ್ನ ತಾಯಿ ಶ್ರೀಮತಿ ಪಾರ್ವತಮ್ಮ ಮತ್ತು ನನ್ನ ಅಣ್ಣ ಶ್ರೀ ವೆಂಕಟೇಶ್ ರವರು ಸದರಿ ಜಮೀನಿನಲ್ಲಿ ಭಾಗ ಪಡೆಯಲು ನ್ಯಾಯಾಲಯುದಲ್ಲಿ ಕೇಸು ದಾಖಲಿಸೋಣವೆಂದು ನಿರ್ಧರಿಸಿ ನನ್ನ ಗಂಡ ಕೃಷ್ಣಮೂರ್ತಿ*

*PW:16CW:23*

*..................................................................................*

*...................................................................................,........*

*................................................................... ಕೃತ್ಯಕ್ಕೆ ಬಳಕೆಯಾಗಿರುವ ಕೆಎ - 03 - ಜೆವಿ - 8813 ನೊಂದಣಿ ಸಂಖ್ಯೆಯ ಹೊಂಡಾ ಏವಿಟರ್ ದಿವಚಕ್ರ ವಾಹವನ್ನು ನೋಡಿದ್ದು ಮತ್ತೊಮ್ಮೆ ನೋಡಿದರೆ ಗುರುತಿಸುತ್ತೇನೆ. " ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ **- 30** ಎಂದು ಗುರುತಿಸಲಾಯಿತು.*

***4)** ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನಾನು ನಿಪಿ - 30 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.*

*ಪಾಟೀ ಸವಾಲುಃ ಶ್ರೀ . ಹೆಚ್ . ಆರ್ . ವಿ ಮತ್ತು ಕೆ. ಎನ್ . ಎಂ ವಕೀಲರು ಆರೋಪಿತರ ಪರವಾಗಿ*
*ಏನೂ ಇಲ್ಲವೆಂದು ನುಡಿದಿರುತ್ತಾರೆ.*

*ಮರುವಿಚಾರಣೆಃ ಇಲ್ಲ.*

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 11.08.2022 ರಂದು ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು.)*

*ಓದಿ ಹೇಳಿ ಕೇಳಿ ಸರಿ ಇದೆ*

*ಸಹಿ/-*
*ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,*
*ಚಿಕ್ಕಬಳ್ಳಾಪುರ.*

*PW:16CW:23*